ಸೃಜನಿ

SRUJANI: Indian Journal of Innovative Research and Development (SIJIRD)
Volume-4 Issue 5, November-December 2025, Pp. 43-47
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಮೌಲ್ಯ ಶಿಕ್ಷಣದಲ್ಲಿ ಸಮೂಹ ಮಾಧ್ಯಮದ ಪಾತ್ರ

**ಡಾ. ವಿಜಯಲಕ್ಷ್ಮೀ ಕಟ್ಟಿ**
ಉಪನ್ಯಾಸಕರು, ಸಮಾಜಶಾಸ್ತ್ರ ವಿಭಾಗ, ಸರಕಾರಿ ಮಹಾವಿದ್ಯಾಲಯ, ಸಿಂಧನೂರು

***Abstract:***
*ಸಮೂಹ ಮಾಧ್ಯಮಗಳು ಜ್ಞಾನವನ್ನು ಹರಡುವುದರಲ್ಲಿ ಸಾಮಾಜಿಕ ಮೌಲ್ಯಗಳನ್ನು ಪ್ರಚಾರ ಮಾಡುವುದರಲ್ಲಿ ಮತ್ತು ಮೌಲ್ಯ ಶಿಕ್ಷಣಕ್ಕೆ ಪೂರಕವಾಗಿ ನಮ್ಮ ಸಮಾಜದಲ್ಲಿ ಬಹಳ ಮುಖ್ಯವಾದ ಪಾತ್ರವನ್ನು ವಹಿಸುತ್ತದೆ. ಇದು ಹಿರಿಯರ ಮತ್ತು ಯುವ ಪೀಳಿಗೆ ಮೇಲೂ ಪ್ರಮುಖ ಪ್ರಭಾವ ಬೀರುತ್ತದೆ. ಮೌಲ್ಯ ಶಿಕ್ಷಣದಲ್ಲಿ ಮಾಧ್ಯಮದ ಪಾತ್ರವು ಇಂದಿನ ಶೈಕ್ಷಣಿಕ ವ್ಯವಸ್ಥೆಯಲ್ಲಿ ಬೋಧನಾ ವಿಷಯ ಮತ್ತು ಕಲಿಕೆಯನ್ನು ತಲುಪಿಸುವಲ್ಲಿ ಮತ್ತು ವ್ಯಕ್ತಿತ್ವಗಳನ್ನು ರೂಪಿಸುವಲ್ಲಿ ಪ್ರಮುಖ ಪಾತ್ರವಹಿಸುತ್ತದೆ.*

**Keywords:** *ಮೌಲ್ಯ ಶಿಕ್ಷಣ, ಸಮೂಹ ಮಾಧ್ಯಮ, ದಿನಪತ್ರಿಕೆ, ರೇಡಿಯೋ, ದೂರದರ್ಶನ*

**ಪೀಠಿಕೆ**

ಇಂದಿನ ಜಾಗತೀಕರಣ ಮತ್ತು ತಂತ್ರಜ್ಞಾನ ಯುಗದಲ್ಲಿ ಸಮಾಜದ ಮೇಲೆ ಗಾಢವಾದ ಪ್ರಭಾವ ಬೀರುವ ಶಕ್ತಿಯಾಗಿ ಸಮೂಹ ಮಾಧ್ಯಮಗಳು ಬೆಳೆಯುತ್ತಿವೆ. ಆಡಳಿತ, ಅಭಿವೃದ್ಧಿ, ಮಾನವ ಹಕ್ಕುಗಳು ಮುಂತಾದಗಳ ಬಗ್ಗೆ ಮಾಹಿತಿಯನ್ನು ಜನರಿಗೆ ತಿಳಿಸುವಲ್ಲಿ ಹಾಗೂ ಮಾಧ್ಯಮಗಳು ಹಲವು ವಿಭಿನ್ನ ರೂಪಗಳಲ್ಲಿ ಪತ್ರಿಕೆಗಳು, ನಿಯತಕಾಲಿಕೆಗಳು, ಪುಸ್ತಕಗಳು, ಮುದ್ರಣ ಮಾಧ್ಯಮಗಳು, ರೇಡಿಯೋ, ದೂರದರ್ಶನ, ಇಂಟರ್ನೆಟ್ ಮತ್ತು ಸಿನೆಮಾ ಮುಂತಾದ ಎಲೆಕ್ಟ್ರಾನಿಕ್ ಮಾಧ್ಯಮಗಳು ಬೋಧನೆ ಮತ್ತು ಕಲಿಕೆಯಲ್ಲಿ ಪ್ರಬಲ ಪಾತ್ರವಹಿಸುತ್ತವೆ. ಆದ್ದರಿಂದ ಮೌಲ್ಯ ಶಿಕ್ಷಣದಲ್ಲಿ ಸಮೂಹ ಮಾಧ್ಯಮಗಳ ಪಾತ್ರವನ್ನು ವ್ಯಾಪಕವಾಗಿ ಚರ್ಚಿಸಿದೆ.

ಇಂದಿನ ಜಗತ್ತಿನಲ್ಲಿ ಮಾಧ್ಯಮವು ಆಹಾರ ಮತ್ತು ಬಟ್ಟೆಗಳಷ್ಟೆ ಆಗತ್ಯವಾಗಿದೆ. ಸಮಾಜವನ್ನು ಬಲಪಡಿಸುವಲ್ಲಿ ಮಾಧ್ಯಮವು ಮಹೋನ್ನತ ಪಾತ್ರವನ್ನು ವಹಿಸುತ್ತಿದೆ, ಮಾಧ್ಯಮವು ಪ್ರಮುಖ ಸಾಮಾಜೀಕರಣ ಪ್ರಭಾವ, ಸಂಸ್ಕೃತಿಯ ವಾಹಕ, ಶಿಕ್ಷಣ ಮತ್ತು ಮನೋರಂಜನೆ, ರಾಜಕೀಯ ಸಂವಹನ ಮತ್ತು ಭಾಗವಹಿಸುವಿಕೆಯ ಪ್ರಜಾಪ್ರಭುತ್ವದಲ್ಲಿ ಪ್ರಮುಖ ಅಂಶ ಮತ್ತು ಸೈದ್ಧಾಂತಿಕ ಮೌಲ್ಯಗಳನ್ನು ಮತ್ತು ರೂಢಿಗಳು, ವರ್ತನೆಗಳು ಮತ್ತು ನಂಬಿಕೆಗಳ ಮೇಲೆ ಹಲವು ವಿಧಗಳಲ್ಲಿ ಪರಿಣಾಮ ಬೀರುತ್ತದೆ.

ಇದಕ್ಕೆ ಅತ್ಯುತ್ತಮ ಉದಾಹರಣೆ ಎಂದರೆ ಪೋಲಿಯೋ ಎಂಬ ಕಾಯಿಲೆ, ಇದರ ನಿರ್ಮೂಲನೆಗಾಗಿ ಭಾರತ ಸರ್ಕಾರವು ಮಾಧ್ಯಮಗಳು ಮತ್ತು ಇತರ ಜಾಹೀರಾತುಗಳ ಮೂಲಕ ಅವರು ಪ್ರಾರಂಭಿಸಿದ ಪಲ್ಸ್ ಪೋಲಿಯೊ ಅಭಿಯಾನದ ಬಗ್ಗೆ ಜನರಿಗೆ ಅರಿವು ಮೂಡಿಸಿತು ಮತ್ತು ಭಾರತವನ್ನು ಪೋಲಿಯೊ ಪೀಡಿತ ಪಟ್ಟಿಯಿಂದ ತೆಗೆದುಹಾಕಿತು. ಇದರೊಂದಿಗೆ

***Please cite this article as:*** ವಿಜಯಲಕ್ಷ್ಮೀ ಕಟ್ಟಿ. (2025). ಮೌಲ್ಯ ಶಿಕ್ಷಣದಲ್ಲಿ ಸಮೂಹ ಮಾಧ್ಯಮದ ಪಾತ್ರ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರಿಸರ್ಚ್ ಅಂಡ್ ಡೆವೆಲಪ್‌ಮೆಂಟ್,* 4(5), 43–47

ಏಡ್ಸ್‌ನಂತಹ ಕಾಯಿಲೆಗಳ ಬಗ್ಗೆ ಜನರಲ್ಲಿ ಇದ್ದ ತಪ್ಪು ಕಲ್ಪನೆಗಳನ್ನು ಮಾಧ್ಯಮಗಳ ಸಹಾಯದಿಂದ ತೆಗೆದುಹಾಕಲಾಗಿದೆ.

ಇಂದಿನ ಮಾಧ್ಯಮಗಳಿಂದ ನಮ್ಮ ದೇಶದ ರೈತರು ಕೂಡ ಸಾಕಷ್ಟು ಪ್ರಯೋಜನವನ್ನು ಪಡೆಯುತ್ತಿದ್ದಾರೆ ಏಕೆಂದರೆ ದೂರದರ್ಶನದಲ್ಲಿ ಇಂತಹ ಅನೇಕ ಕಾರ್ಯಕ್ರಮಗಳನ್ನು ಪ್ರಸಾರ ಮಾಡಲಾಗುತ್ತದೆ, ಇದರಲ್ಲಿ ರೈತರಿಗೆ ಹೊಸ ಮತ್ತು ವೈಜ್ಞಾನಿಕ ಕೃಷಿ ವಿಧಾನಗಳ ಬಗ್ಗೆ ತಿಳಿಸಲಾಗುತ್ತದೆ. ಇದು ರೈತರ ಬೆಳೆ ಉತ್ಪಾದನಾ ಸಾಮರ್ಥ್ಯದ ಮೇಲೆ ನೇರ ಪರಿಣಾಮ ಬೀರುತ್ತದೆ.

**ಮೌಲ್ಯ ಶಿಕ್ಷಣದ ಅರ್ಥ**

ಮೌಲ್ಯ ಶಿಕ್ಷಣವೆಂದರೆ ವ್ಯಕ್ತಿಯಲ್ಲಿ ಉತ್ತಮ ನೈತಿಕ ಗುಣಗಳನ್ನು ಬೆಳಸಿ ಅವನನ್ನು ಸಮಾಜಮುಖಿ, ಜವಾಬ್ದಾರಿಯುತ ಹಾಗೂ ಮಾನವೀಯ ಮೌಲ್ಯವುಳ್ಳ ವ್ಯಕ್ತಿಯಾಗಿ ರೂಪಿಸುವ ಶಿಕ್ಷಣವಾಗಿದೆ.

**ಸಮೂಹ ಮಾಧ್ಯಮಗಳ ಅರ್ಥ**

ಸಮೂಹ ಮಾಧ್ಯಮಗಳು ಎಂದರೆ ದೊಡ್ಡ ಪ್ರಮಾಣದ ಜನರಿಗೆ ಒಂದೇ ಸಮಯದಲ್ಲಿ ಮಾಹಿತಿ, ಮನೋರಂಜನೆ ಮತ್ತು ಶಿಕ್ಷಣವನ್ನು ಒದಗಿಸುವ ಸಾಧನವಾಗಿದೆ. ಪತ್ರಿಕೆಗಳು, ರೇಡಿಯೋ, ದೂರದರ್ಶನಗಳು, ಧ್ವನಿ ದೃಶ್ಯ ಮಾಧ್ಯಮಗಳ ಮೂಲಕ ಜನಮನಗಳನ್ನು ಆಕರ್ಷಿಸುತ್ತವೆ. ಇಂಟರ್ನೆಟ್ ಮತ್ತು ಸಾಮಾಜಿಕ ಜಾಲತಾಣಗಳು ವೇಗವಾಗಿ ಅಭಿಪ್ರಾಯಕ್ಕೆ ಅವಕಾಶ ಕಲ್ಪಿಸುತ್ತವೆ. ಈ ಎಲ್ಲಾ ಮಾಧ್ಯಮಗಳು ಸಮಾಜದ ಪ್ರತಿಬಿಂಬವಾಗಿರುವುದರಿಂದ, ಸಮಾಜವನ್ನು ರೂಪಿಸುವ ಶಕ್ತಿಯನ್ನು ಹೊಂದಿದೆ.

**ಮೌಲ್ಯ ಶಿಕ್ಷಣದಲ್ಲಿ ಸಮೂಹ ಮಾಧ್ಯಮಗಳ ಪಾತ್ರ**

***ನೈತಿಕ ಮೌಲ್ಯಗಳ ಪ್ರಸಾರ:*** ಸಮೂಹ ಮಾಧ್ಯಮಗಳು ಕಥೆ, ಧಾರವಾಹಿ, ಚಲನಚಿತ್ರಗಳು ಮತ್ತು ಕಾದಂಬರಿ ಲೇಖನಗಳ ಮೂಲಕ ಸತ್ಯ, ನ್ಯಾಯ, ಪ್ರಾಮಾಣಿಕತೆ, ತ್ಯಾಗ ಮತ್ತು ಸಹಾನುಭೂತಿ ಮುಂತಾದ ಮೌಲ್ಯಗಳನ್ನು ಜನರಿಗೆ ಪರಿಚಯಿಸುತ್ತವೆ. ವಿಶೇಷವಾಗಿ ಯುವ ಜನಾಂಗದವರಿಗೆ ಉತ್ತಮ ಮೌಲ್ಯಗಳನ್ನು ಬೆಳೆಸುತ್ತವೆ.

***ಸಾಮಾಜಿಕ ಜಾಗೃತಿ ಮೂಡಿಸುವುದು:*** ಸಮೂಹ ಮಾಧ್ಯಮಗಳು ಬಾಲಕಾರ್ಮಿಕತೆ, ಲಿಂಗ ಅಸಮಾನತೆ, ಮಧಪಾನದ ಪರಿಣಾಮ, ಪರಿಸರ ಮಾಲಿನ್ಯ, ಆರೋಗ್ಯ ಜಾಗೃತಿ ಮುಂತಾದ ವಿಷಯಗಳಲ್ಲಿ ಮಾಧ್ಯಮಗಳು ಸಮಾಜವನ್ನು ಎಚ್ಚರಗೊಳಿಸುತ್ತವೆ. ಈ ಮೂಲಕ ವ್ಯಕ್ತಿಯಲ್ಲಿ ಸಾಮಾಜಿಕ ಜವಾಬ್ದಾರಿಯನ್ನು ಬೆಳೆಸುತ್ತದೆ.

***ಪ್ರಜಾಪ್ರಭುತ್ವ ಮೌಲ್ಯಗಳ ಬಲವರ್ಧನೆ*** : ಸ್ವಾತಂತ್ರ್ಯ, ಸಮಾನತೆ, ನ್ಯಾಯ, ಮಾನವ ಹಕ್ಕುಗಳು ಮುಂತಾದ ಪ್ರಜಾಪ್ರಭುತ್ವ ಮೌಲ್ಯಗಳನ್ನು ಮಾಧ್ಯಮಗಳು ಜನರಿಗೆ ತಿಳಿಸುತ್ತವೆ ಮತ್ತು ವಾದ–ವಿವಾದಗಳು ಜನತಾಂತ್ರಿಕ ಮನೋಭಾವನೆಯನ್ನು ಬೆಳೆಸುತ್ತವೆ.

***ವ್ಯಕ್ತಿತ್ವ ವಿಕಸನ ಮೂಡಿಸುವುದು*** : ವಿದ್ಯಾರ್ಥಿಗಳು ಮತ್ತು ಯುವಕರು ತಮ್ಮ ಆದರ್ಶಗಳನ್ನು ರೂಪಿಸಿಕೊಳ್ಳಲು ಮಾಧ್ಯಮಗಳು ಮಾರ್ಗದರ್ಶನ ನೀಡುತ್ತವೆ. (ಶೈಕ್ಷಣಿಕ ಕಾರ್ಯಕ್ರಮಗಳು, ಚರ್ಚೆಗಳು, ಸಂದರ್ಶನಗಳು ಹಾಗೂ ಡಾಕ್ಯೂಮೆಂಟರಿಗಳು)

***ಶಾಂತಿ ಮತ್ತು ಸಹಿಷ್ಣುತೆ*** : ಸಮೂಹ ಮಾಧ್ಯಮಗಳು ಹಿಂಸಾಚಾರ ಮತ್ತು ದ್ವೇಷದ ವಿರುದ್ಧ ಶಾಂತಿ, ಸಹಬಾಳ್ವೆ ಮತ್ತು ಸಹಿಷ್ಣುತೆ ಸಾರಿತ್ತದೆ ಮತ್ತು ಸಮಾಜದಲ್ಲಿ ಸೌಹಾರ್ದತೆಯನ್ನು ಹೆಚ್ಚುಸುತ್ತದೆ.

***ರಾಷ್ಟ್ರೀಯ ಏಕತೆ ಮತ್ತು ಸಾಂಸ್ಕೃತಿಕ ಮೌಲ್ಯಗಳ ಸಂರಕ್ಷಣೆ*** : ವಿಭಿನ್ನ ಭಾಷೆ, ಸಂಸ್ಕೃತಿ ಮತ್ತು ಪರಂಪರೆಗಳನ್ನು ಪರಿಚಯಿಸುವ ಮೂಲಕ ಸಮೂಹ ಮಾಧ್ಯಮಗಳು ರಾಷ್ಟ್ರೀಯ ಏಕತೆಯನ್ನು ಬಲಪಡಿಸುತ್ತವೆ. ಹಬ್ಬಗಳು, ಕಲೆ, ಸಾಹಿತ್ಯ ಮತ್ತು ಇತಿಹಾಸದ ಕುರಿತು ಸಾಂಸ್ಕೃತಿಕ ಮೌಲ್ಯಗಳನ್ನು ಉಳಿಸುವಲ್ಲಿ ಕೆಲಸ ಮಾಡುತ್ತದೆ.

**ಮೌಲ್ಯ ಶಿಕ್ಷಣಕ್ಕೆ ಸಮೂಹ ಮಾಧ್ಯಮಗಳು ಪರಿಣಾಮಗಳು ಮತ್ತು ಜವಾಬ್ದಾರಿ**

ಸಮೂಹ ಮಾಧ್ಯಮಗಳನ್ನು ಸದ್ಬಳಕೆ ಮಾಡಿಕೊಂಡರೆ ಮೌಲ್ಯಶಿಕ್ಷಣಕ್ಕೆ ಸಹಾಯಕವಾಗುತ್ತದೆ. ಆದರೆ ದುರ್ಬಳಕೆಗೊಂಡರೆ ಮೌಲ್ಯ ಕುಸಿತಕ್ಕೂ ಕಾರಣವಾಗುತ್ತದೆ. ಅಶ್ಲೀಲತೆ, ತಪ್ಪು ಮಾಹಿತಿ, ಸುಳ್ಳು ಸುದ್ದಿಗಳು ಮುಂತಾದ ವಿಷಯಗಳು ಯುವ ಜನರ ಮೇಲೆ ಕೆಟ್ಟ ಪರಿಣಾಮ ಬೀರುತ್ತವೆ. ಸಾಮಾಜಿಕ ಜಾಲತಾಣಗಳಲ್ಲಿ ಕಾಣುವ ಋಣಾತ್ಮಕ ಪ್ರವೃತ್ತಿಗಳು ಮೌಲ್ಯ ಶಿಕ್ಷಣಕ್ಕೆ ಸವಾಲಾಗಿವೆ.

ಸಮೂಹ ಮಾಧ್ಯಮಗಳು ಸಮಾಜದ ನಾಲ್ಕನೇ ಕಂಬವೆಂದು ಪರಿಗಣಿಸಿದರಿಂದ ಅವುಗಳಿಗೆ ವಿಶೇಷ ಜವಾಬ್ದಾರಿ ಇದೆ. ಶಿಕ್ಷಣಾತ್ಮಕ ಹಾಗೂ ಮೌಲ್ಯಾಧಾರಿತ ವಿಷಯಗಳಿಗೆ ಹೆಚ್ಚಿನ ಪ್ರಾಮುಖ್ಯತೆ ನೀಡಬೇಕು. ಸಮಾಜಮುಖಿ ಕಾರ್ಯಕ್ರಮಗಳ ಮೂಲಕ ಪೋಷಕರಿಗೆ, ವಿದ್ಯಾರ್ಥಿಗಳಿಗೆ, ಶಿಕ್ಷಕರಿಗೆ ಮೌಲ್ಯ ಶಿಕ್ಷಣಕ್ಕೆ ಸಹಕಾರ ಮತ್ತು ಮಾರ್ಗದರ್ಶನ ನೀಡಬೇಕು .

**ಪ್ರಮುಖ ಸಮೂಹ ಮಾಧ್ಯಮಗಳ ಪಾತ್ರ**

ಸಮೂಹ ಮಾಧ್ಯಮ ರೇಡಿಯೋ, ದೂರದರ್ಶನ, ಪತ್ರಿಕೆಗಳು, ನಿಯತಕಾಲಿಕೆಗಳು, ಚಲನಚಿತ್ರಗಳು, ಮುಂತಾದ ತಂತ್ರಜ್ಞಾನವನ್ನು ಬಳಸಿಕೊಂಡು ಹೆಚ್ಚಿನ ಸಂಖ್ಯೆಯ ಪ್ರೇಕ್ಷಕರಿಗೆ ವಿಷಯವನ್ನು ರವಾನಿಸಲಾಗುತ್ತದೆ. ಆದ್ದರಿಂದ ಸಮೂಹ ಮಾಧ್ಯಮವು ಪಠ್ಯ ಪುಸ್ತಕಗಳು ಅಥವಾ ಶಿಕ್ಷಣಕ್ಕಿಂತ ಹೆಚ್ಚಾಗಿ ಪ್ರಪಂಚದ ಬಗ್ಗೆ ಮಾಹಿತಿಯು ದೊಡ್ಡ ಮೂಲವಾಗಿದೆ ಎಂದು ತಿಳಿದುಬರುತ್ತದೆ. ಹೆಚ್ಚಿನ ಮಕ್ಕಳು ಪ್ರಾಯೋಗಿಕವಾಗಿ ಹೊಸ ವಿಷಯಗಳನ್ನು ಕಲಿಯಲು ಇಷ್ಟಪಡುತ್ತಾರೆ. ಮಕ್ಕಳು ಟಿವಿಯಲ್ಲಿ ಅನೇಕ ಐತಿಹಾಸಿಕ ಧಾರಾವಾಹಿಗಳನ್ನು ನೋಡಿದಾಗ, ಅವರು ಪುಸ್ತಕಗಳಿಗಿಂತ, ಓದುವುದಕ್ಕಿಂತ ಹೆಚ್ಚಾಗಿ ಅವುಗಳಿಗೆ ಪ್ರಭಾವಿತರಾಗುತ್ತಾರೆ. ಹೀಗಾಗಿ ಮಾಧ್ಯಮಗಳು ಜಾಗೃತಿ, ಜ್ಞಾನವನ್ನು ಮತ್ತು ಜನರಿಗೆ ಶಿಕ್ಷಣ ನೀಡುವಲ್ಲಿ ಪ್ರಮುಖ ಪಾತ್ರವಹಿಸುತ್ತದೆ.

***ರೇಡಿಯೋ***

ಸಮೂಹ ಸಂವಹನ ಮಾಧ್ಯಮವಾಗಿ ಕಾರ್ಯನಿರ್ವಹಿಸುತ್ತದೆ. ಇದನ್ನು ಪ್ರಪಂಚದ ದೂರದ ಸ್ಥಳಗಳಿಗೆ ಕಾರ್ಯಕ್ರಮಗಳನ್ನು ಪ್ರಸಾರ ಮಾಡಲು ಬಳಸಲಾಗುತ್ತದೆ. ಜೊತೆಗೆ ಮನೋರಂಜನೆಗೂ ರೇಡಿಯೋ ಪ್ರಮುಖವಾಗಿದೆ. ಪ್ರತಿದಿನ ನಾವು ವಿಭಿನ್ನ ಭಾಷಣಗಳನ್ನು, ಚರ್ಚೆಗಳನ್ನು, ಜನಪದ ಹಾಡುಗಳನ್ನು ಮತ್ತು ರಾಜಮನೆತನದ ಇತಿಹಾಸವನ್ನು ವಿದ್ಯಾರ್ಥಿಗಳು ರೇಡಿಯೋ ಮೂಲಕ ತಿಳಿದುಕೊಳ್ಳಲು ಬಹಳ ಸಹಾಯಕವಾಗಿದೆ. ಇದು ವೈಜ್ಞಾನಿಕ ಮತ್ತು ಸಾಂಸ್ಕೃತಿಕ ವಿಷಯಗಳನ್ನು ಪ್ರಸಾರ ಮಾಡುತ್ತದೆ.

***ದೂರದರ್ಶನ***

ಇಂದು ದೂರದರ್ಶನವು ಯುವಕರಲ್ಲಿ ಮನೋರಂಜನೆಯ ಅತ್ಯಂತ ಜನಪ್ರಿಯ ಮೂಲವಾಗಿದೆ. ಈಗ ಟಿವಿಗಳು ಪ್ರತಿಭಾನ್ವಿತ ಅಥವಾ ಬೌದ್ಧಿಕ ಸಾಮಾನ್ಯ ಜನರನ್ನು ಅಥವಾ ವಿದ್ಯಾರ್ಥಿಗಳನ್ನು ರೂಪಿಸಲು ಶಿಕ್ಷಣ ಪ್ರಸಾರ ಕಾರ್ಯಕ್ರಮಗಳನ್ನು ಹೊಂದಿದೆ. ಈ ಕಾರ್ಯಕ್ರಮಗಳು ಶಾಲಾ ಮಕ್ಕಳಿಗೆ ಶಿಕ್ಷಣ ನೀಡುವ ಗುರಿಯನ್ನು ಹೊಂದಿವೆ ಮತ್ತು ಅವು ಉತ್ತಮ ನೈತಿಕ ಮೌಲ್ಯಗಳನ್ನು ತುಂಬುತ್ತವೆ. ದೂರದರ್ಶನವು ನೃತ್ಯಗಳು, ಐತಿಹಾಸಿಕ ಸ್ಥಳಗಳು, ವಸ್ತು ಸಂಗ್ರಹಾಲಯಗಳು ಇತ್ಯಾದಿಗಳ ಕುರಿತು ಕಿರುಚಿತ್ರಗಳ ಮೂಲಕ ದೇಶದ ಇತಿಹಾಸದ ಉತ್ತಮ ಕಲ್ಪನೆಯನ್ನು ನೀಡುತ್ತದೆ. ಹೀಗಾಗಿ ದೂರದರ್ಶನವು ಜನಸಾಮಾನ್ಯರಿಗೆ ಶಿಕ್ಷಣ ನೀಡುವಲ್ಲಿ ಸಮೂಹ ಮಾಧ್ಯಮದ ಸಾಧನವಾಗಿ ಪ್ರಮುಖ ಪಾತ್ರ ವಹಿಸುತ್ತದೆ. ಮಾನಸಿಕ ಸಮಸ್ಯೆ, ಮಕ್ಕಳ ಆರೋಗ್ಯ ಮತ್ತು ಪೌಷ್ಟಿಕಾಂಶ ಕಾರ್ಯಕ್ರಮ, ಸಾಮಾಜಿಕ ಜವಾಬ್ದಾರಿ ಕಾರ್ಯಕ್ರಮ, ತಾಯಿಯ ಆರೈಕೆ ಮುಂತಾದ ಜಾಗೃತ ಕಾರ್ಯಕ್ರಮಗಳಾಗಿವೆ.

**ಪತ್ರಿಕೆಗಳು**

ಇಂದಿನ ಪ್ರತಿಕೆಗಳು ವ್ಯವಹಾರ ಮತ್ತು ದೈನಂದಿನ ಬೆಳವಣಿಗೆಯ ಬಗ್ಗೆ ದೇಶ ವಿದೇಶಗಳ ಪರಿಪೂರ್ಣ ಮಾಹಿತಿಯನ್ನು ನೀಡುವ ಪತ್ರಿಕೆಗಳಾಗಿವೆ. ರೇಡಿಯೋ ಮತ್ತು ದೂರದರ್ಶನದ ಜೊತೆಗೆ ಪತ್ರಿಕೆಗಳು ವೇಗವಾಗಿ ಸಂದೇಶಗಳನ್ನು ರವಾನಿಸುತ್ತದೆ. ಮತ್ತೊಂಡೆಗೆ ನಿರ್ದಿಷ್ಟ ಘಟನೆಯ ಬಗ್ಗೆ ಹೆಚ್ಚಿನ ವಿವರಣೆಗಳನ್ನು ನೀಡುವುದಲ್ಲದೆ ಅದು ಹೆಚ್ಚಿನ ವಿಷಯಗಳನ್ನು ನೀಡುತ್ತದೆ. ಸಾಮಾಜಿಕ ಮಾದ್ಯಮಗಳು ನಕಲಿ ಸುದ್ಧಿಗಳನ್ನು ನೀಡುತ್ತವೆ ಆದರೆ ಪತ್ರಿಕೆಗಳು ಸತ್ಯದ ಸುದ್ದಿಯನ್ನು ಹೇಳುತ್ತವೆ ಮತ್ತು ದಿನದ ಯಾವುದೇ ಸಮಯದಲ್ಲಿ ಪತ್ರಿಕೆಯನ್ನು ಓದಬಹುದು.

**ಚಲನಚಿತ್ರಗಳು**

ಚಲನಚಿತ್ರಗಳು ಮಾನವ ಮನಸ್ಸಿನ ಮೇಲೆ ಬಹಳ ಕೌಶಲ್ಯದಿಂದ ಪ್ರಭಾವ ಬೀರುತ್ತವೆ. ಅವು ವಿದ್ಯಾರ್ಥಿಗಳಲ್ಲಿ ಶಾಶ್ವತ ಮೌಲ್ಯಗಳನ್ನು ಸೃಷ್ಟಿಸಲು ಸಹಾಯ ಮಾಡುತ್ತವೆ. ಶಿಕ್ಷಣದಲ್ಲಿ ಚಲನಚಿತ್ರಗಳ ವ್ಯಾಪಕ ಬಳಕೆಯೂ ಇದೆ. ವಾಣಿಜ್ಯ ಚಿತ್ರಗಳ ಸವಾಲನ್ನು ಎದುರಿಸಲು, ಅವುಗಳಿಗೆ ಪೂರಕವಾಗಿ ಮತ್ತು ಮಕ್ಕಳು ಮತ್ತು ವಯಸ್ಕರಿಗೆ ಶಿಕ್ಷಣ ನೀಡುವ ಹೊಸ ಮಾರ್ಗಗಳನ್ನು ಅನ್ವೇಷಿಸಲು ಶೈಕ್ಷಣಿಕ ಚಲನಚಿತ್ರಗಳು ಬರುತ್ತಿವೆ. ಈ ಚಲನಚಿತ್ರಗಳು ಹೆಚ್ಚಿನ ವಾಸ್ತವತೆಯನ್ನು ನೀಡಬಹುದು, ವರ್ತನೆಗಳನ್ನು ಪ್ರಭಾವಿಸಬಹುದು, ಕಾರಣ ಮತ್ತು ಪರಿಣಾಮ ಸಂಬಂಧವನ್ನು ತೋರಿಸಬಹುದು ಮತ್ತು ವಿದ್ಯಾರ್ಥಿಗಳನ್ನು ಪ್ರೇರೇಪಿಸಬಹುದು. ಹೀಗಾಗಿ ಈ ಚಲನಚಿತ್ರಗಳು ಉತ್ತಮ ಬೋಧನಾ ಶಕ್ತಿಯನ್ನು ಹೊಂದಿವೆ, ಇದನ್ನು ತರಗತಿಯಲ್ಲಿ ಬುದ್ಧಿವಂತಿಕೆಯಿಂದ ಬಳಸಬಹುದು.

**ಉಪಸಂಹಾರ**

ರೇಡೀಯೋ, ಪತ್ರಿಕೆಗಳು, ದೂರದರ್ಶನದಂತಹ ಸಮೂಹ ಮಾಧ್ಯಮ ಸಾಧನಗಳು ಶೈಕ್ಷಣಿಕ ಉದ್ದೇಶಗಳನ್ನು ಮತ್ತು ವಿವಿಧ ರೀತಿಯ ಮನೋರಂಜನೆಯನ್ನು ಪ್ರೋತ್ಸಾಹಿಸುತ್ತವೆ. ಒಟ್ಟಾರೆ ಹೇಳುವುದಾದರೆ, ಮೌಲ್ಯಶಿಕ್ಷಣದಲ್ಲಿ ಸಮೂಹ ಮಾದ್ಯಮಗಳ ಪಾತ್ರ ಅತ್ಯಂತ ಮಹತ್ವಾಗಿದೆ. ಇಂದಿನ ಡಿಜಿಟಲ್ ಯುಗದಲ್ಲಿ ಮಾಧ್ಯಮಗಳು ವ್ಯಕ್ತಿಯ ಜೀವನದಲ್ಲಿ ಅವಿಭಾಜ್ಯ ಅಂಗವಾಗಿವೆ. ಅವುಗಳನ್ನು ಸರಿಯಾದ ದಿಕ್ಕಿನಲ್ಲಿ ಜವಾಬ್ದಾರಿಯುತವಾಗಿ ಬಳಸಿದರೆ ಮೌಲ್ಯಾಧಾರಿತ ಸಮಾಜ ನಿರ್ಮಾಣಕ್ಕೆ ದೊಡ್ಡ ಕೊಡುಗೆ ನೀಡಬಹುದು. ನೈತಿಕತೆ, ಮಾನವೀಯತೆ ಮತ್ತು ಸಾಮಾಜಿಕ ಜವಾಬ್ದಾರಿಯನ್ನು ಬೆಳೆಸುವಲ್ಲಿ ಸಮೂಹ ಮಾದ್ಯಮಗಳು ಶಕ್ತಿಶಾಲಿ ಸಾಧನಗಳಾಗಿವೆ.

**ಪರಾಮರ್ಶನ ಗ್ರಂಥಗಳು**


- Balagangadhara, G. (2014). *Value education for human development*. Himalaya Publishing House.
- Chakrabarty, M. (2016). *Values and ethics in education*. Sage Publications.
- Halstead, J. M., & Taylor, M. J. (2000). Learning and teaching about values in schools. *Cambridge Journal of Education, 30*(2), 169–202.
- Kaur, R., & Sharma, P. (2019). Value education and character formation among students: A conceptual review. *International Journal of Education and Management Studies, 9*(3), 123–129.
- Lickona, T. (1996). Eleven principles of effective character

education. *Journal of Moral Education*, *25*(1), 93–100.

- NCERT. (2012). *Education for values in schools: A framework*. National Council of Educational Research and Training.
- Rokeach, M. (1973). *The nature of human values*. Free Press
- Tilak, J. B. G. (2018). Ethics and values in higher education. *Indian Journal of Public Administration, 64*(3), 451–466.
- UNESCO. (2015). *Global citizenship education: Topics and learning objectives*. UNESCO Publishing.
- UNESCO. (2018). *Learning to live together: Education policies for intercultural and values education*. UNESCO Publishing.